ಯೋಚನೆ ಬಿಟ್ಟು ನಾನು ಡೈನಿಂಗ್ ಹಾಲಿನಲ್ಲಿ ಕುಳಿತುಕೊಂಡೆ. ದೇವೇಂದ್ರ ಕೂಡ ಅಲ್ಲಿಗೆ ಬಂದರು. ವಿಭಾ ಅವರಿಗೆ– 'ಕೇಳಿ, ಇವತ್ತು ನೀವೊಬ್ಬರೆ ಆಫೀಸಿಗೆ ಹೊರಟು ಬಿಡಿ, ನಾನು ಅಕ್ಕನನ್ನು ಮನೆಗೆ ಕಳುಹಿಸಿ ಬರುತ್ತೇನೆ. ನಾವು ಬೇಗ ಹೊರಡುತ್ತೇವೆ, ಬಸ್ಸಿನಲ್ಲಿ ಹೋಗುವುದಲ್ಲವಾ.'

'ಯಾಕೆ ಆಟೊದಲ್ಲಿ ಹೋಗಬಹುದಲ್ಲ?' ಎಂದೆ ನಾನು.

'ಬೇಡಕ್ಕ, ಆಟೊಗೇಕೆ ಸುಮ್ಮನೇ ದುಡ್ಡು ಹಾಕುವುದು, ನೀನು ತಿಂಡಿ ತಿಂದು ಬೇಗ ರೆಡಿಯಾಗು.' ಎಲ್ಲರೂ ತಿಂಡಿ ತಿಂದಾದ ಮೇಲೆ ಅವಳು ಪ್ರಸಾದನಿಗೆ ಯೂನಿಫಾರಂ ತೊಡಿಸಿ ದೇವೇಂದ್ರನಿಗೆ ಅವನನ್ನು ಸ್ಕೂಲಿಗೆ ಬಿಡುವಂತೆ ಹೇಳಿ, ಕುಕ್ಕರಿನಲ್ಲಿ ಅನ್ನ ಬೇಳೆ ಬೇಯಿಸಿ, 'ಪ್ರಸಾದ ಹನ್ನೆರಡು ಗಂಟೆಗೆ ಬರುತ್ತಾನೆ. ಅನ್ನ–ತೊವೆ ತೆಗೆದು ಅಮ್ಮ ಅವನಿಗೆ ಊಟ ಕೊಡುತ್ತಾರೆ' ಎಂದಳು.

'ಹೂಂ– ಇನ್ನೇನು ಮಾಡುವುದು, ಮಗುವಿಗೆ ಬಿಸಿ ಚಪಾತಿಯಂತೂ ಸಿಗುವುದಿಲ್ಲ, ಅನ್ನವನ್ನಾದರೂ ಬಿಸಿಯಾಗಿ ಕೊಡುತ್ತೇನೆ' ವ್ಯಂಗ್ಯವಾಗಿ ಹೇಳಿದರು ಅತ್ತೆ. ಅವರೇ ಬಿಸಿಯಾಗಿ ಎರಡು ಚಪಾತಿ ಮಾಡಿ ಕೊಡಬಹುದಾಗಿತ್ತಲ್ಲ, ನಾನೂ ನಿನ್ನೆಯಿಂದ ನೋಡುತ್ತಿದ್ದೇನೆ, ಮಾಡಿಟ್ಟ ಅಡಿಗೆಯನ್ನು ಮಗುವಿಗೆ ಕೊಡುವುದೇ ಅವರಿಗೆ ದೊಡ್ಡ ಕೆಲಸವೆನಿಸುತ್ತಿದೆ.

ಅವರಿಗೆ ಬರುವೆನೆಂದು ಹೇಳಿ ನಾವು ಹೊರಟೆವು. ದಾರಿಯಲ್ಲಿ, 'ವಿಭಾ, ನಾನೊಬ್ಬಳೇ ಹೋಗುತ್ತಿದ್ದೆನಲ್ಲ, ನೀನೇಕೆ ತೊಂದರೆ ತೆಗೆದುಕೊಂಡೆ?' ಅಂದೆ.

'ನನಗೆ ಗೊತ್ತಕ್ಕ, ನಿನ್ನೊಬ್ಬಳನ್ನೇ ಕಳಿಸಬಹುದಿತ್ತು. ನಾನು ನನ್ನ ಸ್ವಾರ್ಥಕ್ಕಾಗಿಯೇ ಕಳಿಸಲು ಬಂದೆ. ಅದಕ್ಕಾಗಿಯೇ ಆಟೊದಲ್ಲಿ ಹೋಗದೇ ಬಸ್ಸಲ್ಲೇ ಹೋಗೋಣ ಎಂದೆ. ಅದರಿಂದ ಹಣವೂ ಉಳಿಯುತ್ತದೆ, ನಿನ್ನೊಡನೇ ಸ್ವಲ್ಪ ಸಮಯ ಇದ್ದಂತೆಯೂ ಆಗುತ್ತದೆ. ಮನೆಯಲ್ಲಂತೂ ಮನಸ್ಸು ಬಿಚ್ಚಿ ಮಾತಾಡಲೂ ಆಗಲಿಲ್ಲ. ಒಂದು ಕೆಲಸ, ಇನ್ನೊಂದು ಕದ್ದು ಆಲಿಸುವ ಭಯ.'

'ಅಂದರೆ, ಯಾರು ಕದ್ದು ಆಲಿಸುತ್ತಾರೆ?'

'ನನ್ನ ಪರಮ ಪೂಜ್ಯ ಅತ್ತೆಯವರಿಲ್ಲವೇ... ಯಾವಾಗ ಮೆಲ್ಲನೇ ಬಂದು ಬಾಗಿಲ ಹಿಂದೆ ನಿಲ್ಲುವರೋ ಗೊತ್ತೇ ಆಗುವುದಿಲ್ಲ. ಈ ಮನೆಯಲ್ಲಿ ಗಂಡ ಹೆಂಡತಿಯರು ಕೂಡ ಏಕಾಂತದಲ್ಲಿ ಮಾತಾಡುವುದು ಕಷ್ಟ.'

'ದೇವೇಂದ್ರ ಏನೂ ಹೇಳುವುದಿಲ್ಲವೇ?'

'ಅವರಂತೂ ಸಾಕ್ಷಾತ್ ಶ್ರವಣಕುಮಾರರು. ಅಮ್ಮ ತಮ್ಮ ಪ್ರೇಮ ವಿವಾಹಕ್ಕೆ ಅನುಮತಿ ಕೊಟ್ಟಿರುವುದನ್ನೇ ಅವರು ತಮ್ಮ ಜೀವಮಾನವಿಡೀ ಮರೆಯುವುದಿಲ್ಲ. ಅತ್ತೆ ತಮ್ಮ ಸ್ಥಾನದಿಂದ ಒಂದಿಂಚೂ ಅಲ್ಲಾಡುವುದಿಲ್ಲ. ಒಳ್ಳೆಯ ಮಾತಿನಲ್ಲೇ ಸಂಸ್ಕಾರದ ಹೆಸರಿನಲ್ಲಿ ಎಲ್ಲ ಕೆಲಸ ಮಾಡಿಸುತ್ತಾರೆ. ಒಮ್ಮೊಮ್ಮೆ ಎಷ್ಟು ಬೇಸರವಾಗುತ್ತದೆಂದರೆ – ಯಾರಿಗೆ ಹೇಳುವುದು. ಅಮ್ಮನೆದುರು ಹೇಳಿಕೊಂಡರೆ, ನನಗೇ ನೀನು ಪ್ರೀತಿ–ಪ್ರೇಮವೆಂದು ನಿನ್ನ ಕಾಲ ಮೇಲೆ ನೀನೇ ಚಪ್ಪಡಿ ಎಳೆದುಕೊಂಡೆ. ನಾನೇನು ಮಾಡಲಿ, ಈಗ ಅನುಭವಿಸು ಎನ್ನುತ್ತಾಳೆ.'

'ಅಮ್ಮ ನೋಡಿದ್ದರೆ ಇದಕ್ಕಿಂತ ಒಳ್ಳೆಯ ವರ ನೋಡುತ್ತಿದ್ದಳೆ, ನನಗ್ಯಾವ ಒಳ್ಳೆಯ ಸಂಬಂಧ ನೋಡಿದ್ದಾಳೆ?'

'ಆದರೆ ನೀನು ನಿನ್ನ ಕಷ್ಟವನ್ನು ಹೇಳಿಕೊಳ್ಳಬಹುದಲ್ಲ. ನನಗೆ ಹಾಗೆ ಹೇಳಿಕೊಳ್ಳಲೂ ಆಗುವುದಿಲ್ಲ.' ಅಷ್ಟರಲ್ಲಿ ಬಸ್ ಬಂತು. ಅಂಥ ಗಲಾಟೆಯೂ ಇರಲಿಲ್ಲ. ಇಬ್ಬರಿಗೂ ಒಂದೇ ಕಡೆ